ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಸ್ವಲ್ಪ ಅವಕಾಶ ಕೊಡಬೇಕು.

ಅಧ್ಯಕ್ಷರು.—ನಾನು ಪರ್ಮಿಷನ್ ಕೊಡುವುದಿಲ್ಲ. I have already called the nex member. The Hon. Minister is on his legs to reply.

ಶ್ರೀ ಎಂ. ವೀರಪ್ಪ ಮೊಯಿಲಿ.—ಆದರೆ ಸಾಮಾನ್ಯವಾಗಿರತಕ್ಕಂಥ ಒಂದು ಪ್ರಶ್ನೆಯನ್ನು ಕೇಳುವುದಕ್ಕೆ ಒಬ್ಬ ಸದಸ್ಯರ ಹಕ್ಕನ್ನು ಮೊಟಕು ಮಾಡತಕ್ಕಂಥದ್ದು ಆಗಬಾರದು. ಪ್ರಶ್ನೆಯನ್ನು ತಾವು ನೋಡಬೇಕು.

ಅಧ್ಯಕ್ಷರು.—ಮಾನ್ಯ ದೇವೇಗೌಡರೇ, ತಾವು ಉತ್ತರ ಹೇಳಿ. ನಾನು ಪರ್ಮಿಷನ್ ಕೊಟ್ಟಿಲ್ಲ, ಕೊಡುವುದೂ ಇಲ್ಲ. ನಾನು ಈ ಎಲ್ಲಾ ಪ್ರಶ್ನೆಯನ್ನೂ ನಿನ್ನೆ ರಾತ್ರಿಯೇ ನೋಡಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ಪ್ರಶ್ನೆಯನ್ನು ನೋಡಿ ಇಡೀ ರಾಜ್ಯಕ್ಕೆ ಈ ಪ್ರಶ್ನೆಯಿಂದ ಲಾಭ ಆಗುತ್ತಿದ್ದರೆ ಏತಕ್ಕೆ ನಮಗೆ ಕೇಳುವುದಕ್ಕೆ ತಾವು ಅವಕಾಶ ಕೊಡಬಾರದು.

ಅಧ್ಯಕ್ಷರು.—ನಾನು ಪರ್ಮಿಷನ್ ಕೊಟ್ಟಿಲ್ಲ, ಕೊಡುವುದೂ ಇಲ್ಲ ಒಂದು ಮಿನಿಟ್ಕೂ ಅವಕಾಶ ಕೊಡುವುದಿಲ್ಲ.

ಅಧ್ಯಕ್ಷರು.—ಇನ್ನೂ ೧೯ ಪ್ರಶ್ನೆಗಳು ಇವೆ. ಬೇರೆಯವರಿಗೆ ಅವಕಾಶ ಮಾಡಿ ಕೊಡಬೇಕು. ದಯವಿಟ್ಟು ತಾವು ಕುಳಿತುಕೊಳ್ಳಿ

ಶ್ರೀ ಎಂ. ವೀರಪ್ಪ ಮೊಯಿಲಿ.—ಪ್ರಾಥಮಿಕ ಶಾಲೆಗಳಲ್ಲಿ ಪಂತಿಕೆ ವಸೂಲು ಮಾಡುವುದಕ್ಕೆ ಸರ್ಕಾರ ಶಾಮೀಲು ಆಗಿದೆಯೆಂದು ನಾವು ಹೇಳಬೇಕಾಗುತ್ತದೆ. ಈ ರೀತಿ ಮಾಡುವುದೇ ಸರ್ಕಾರದ ನೀತಿ ಎಂದು ಹೇಳಬೇಕಾಗುತ್ತದೆ.

ಅಧ್ಯಕ್ಷರು.—ಮಾನ್ಯ ದೇವೇಗೌಡರೇ, ನೀವು ಉತ್ತರ ಹೇಳಿ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಇದು ಪಾಲಿಸಿ ಇದೆ. ಸಪ್ಲಿಮೆಂಟರಿ ಕೇಳುವುದಕ್ಕೆ ಅವಕಾಶ ಕೊಡಿ.

MR. SPEAKER.—It is not possible.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—Every thing is possible. ಈ ಸದನದಲ್ಲಿ ಪಾಸಿಬಲ್ ಇದ್ದದ್ದನ್ನು ಪಾಸಿಬಲ್ ಎಂದು ಮಾಡುತ್ತೀರಿ, ಸಪ್ಲಿಮೆಂಟರಿ ಕೇಳುವುದಕ್ಕೆ ಅವಕಾಶ ಕೊಡಿ,

ಅಧ್ಯಕ್ಷರು.—ಇಲ್ಲ ಪರ್ಮಿಷನ್ ಕೊಡುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ಸದನದಲ್ಲಿ ಬಂದಂತಹ ಒಂದು ಪದ್ಧತಿ ಪ್ರಕಾರ ನೀವು ಪರ್ಮಿಷನ್ ಕೊಡಬಹುದು ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆಯೋ ಅದನ್ನೇ ಮಾನ್ಯ ಅಧ್ಯಕ್ಷರು ರೂಲಿಂಗ್ ಎಂದು ಕೊಡುತ್ತಾರೆ.

ಅಧ್ಯಕ್ಷರು.—ನಾನು ಪರ್ಮಿಷನ್ ಕೊಡುವುದಿಲ್ಲ. ಮಾನ್ಯ ದೇವೇಗೌಡರೇ, ನೀವು ಉತ್ತರ ಹೇಳಿ.

ನರಸಿಂಹರಾಜಪುರ ತಾಲ್ಲೂಕು ಮಂತ್ರಿನ ಕೊಪ್ಪ
ಏತ ನೀರಾವರಿ ಕಾಮಗಾರಿ ಕೆಲಸ ಪ್ರಾರಂಭಿಸುವ ಬಗ್ಗೆ

೨೫೮ ಶ್ರೀ ಹೆಚ್. ಜಿ. ಗೋವಿಂದೇ ಗೌಡ(ಶೃಂಗೇರಿ).—ಮಾನ್ಯ ಸಣ್ಣ ನೀರಾವರಿ ಮಂತ್ರಿ ಏತ ನೀರಾವರಿ ರಾಜ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನರಸಿಂಹರಾಜಪುರ ತಾಲ್ಲೂಕಿನ ಮಂತ್ರಿನಕೊಪ್ಪ ವ್ಯವಸಾಯಗಾರರು ಭದ್ರಾ ನದಿಯ ಅಣೆಕಟ್ಟಿನ ನಿರ್ಮಾಣದಿಂದ ಜಮೀನು ಕಳೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಕಿದ್ದಲ್ಲಿ ಮುತ್ತಿನಕೊಪ್ಪ ಏತ ನೀರಾವರಿ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಕೆ. ಕೃಷ್ಣಮೂರ್ತಿ(ಸಣ್ಣ ನೀರಾವರಿ ಮತ್ತು ಏತ ನೀರಾವರಿ ರಾಜ್ಯ ಮಂತ್ರಿಗಳು).–

ಅ) ಹೌದು.

ಆ) ಪರಿಶೀಲನೆಯಲ್ಲಿದೆ.

ಶ್ರೀ ಹೆಚ್. ಡಿ. ದೇವೇಗೌಡ.—(ಮಾನ್ಯ ಲೋಕೋಪಯೋಗಿ ಮಂತ್ರಿಗಳು): ಇದಕ್ಕಾಗಿ ಒಂದು ಕೋಟಿ ೧೬ ಲಕ್ಷ ರೂಪಾಯಿಗಳ ಅಂದಾಜು ತಯಾರು ಮಾಡಲಾಗಿದೆ. ಇದನ್ನು ಕಾವೇರಿ ಜಲಾಯನದ ಪ್ರದೇಶಗಳಲ್ಲಿ ಏತ ನೀರಾವರಿ ಯೋಜನೆಗೆ ಮಾಡಲು ಯೋಚಿಸಲಾಗಿದೆ, ನಬಾರ್ಡ್ ಹಾಗೂ ಮುತ್ತಿತರ ಸಂಸ್ಥೆಗಳಿಂದ ಹಣಕಾಸು ದೊರಕಿಸಿಕೊಂಡು ಇದನ್ನು ಮುಗಿಸಬೇಕೆಂದು ಸರ್ಕಾರದ ಇಚ್ಛೆಯಾಗಿದೆ.

ಶ್ರೀ ಹೆಚ್. ಜಿ. ಗೋವಿಂದೇ ಗೌಡ.—ಇದು ೧೯೬೫ರಲ್ಲಿ ಮುಳುಗಡೆ ಆಗಿರತಕ್ಕ ಪ್ರದೇಶ. ಜಮೀನು ಕಳೆದುಕೊಂಡವರು ತೊಂದರೆಗೆ, ಅನ್ಯಾಯಕ್ಕೆ ಒಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಈ ವರ್ಷ ಅಂದರೆ ೮೭-೮೮ನೇ ಸಾಲಿನಲ್ಲಿ ಈ ಯೋಜನೆಯನ್ನು ಕೈಗೆಳ್ಳುತ್ತಾರೆಯೇ ಎಂದು ಕೇಳಬಹುದಲ್ಲ ?

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಹೇಳಿದ್ದುದು ನಿಜ. ಇದು ಶಿವಮೊಗ್ಗ ಜಿಲ್ಲೆಗೆ ಬರುತ್ತದೆ. ಏತ ನೀರಾವರಿ ಯೋಜನೆಯು ಬಹಳ ಪ್ರಮುಖವಾದದ್ದು. ಇದರ ಮುಳುಗಡೆಯಿಂದ ರೈತರಿಗೆ ಆಗುತ್ತದೆ ಎನ್ನುವುದು ಸರ್ಕಾರಕ್ಕೆ ಗೊತ್ತು ಇದರ ಬಗ್ಗೆ ಬಹಳ ದಿನಗಳಿಂದ ಬೇಡಿಕೆ ಇತ್ತು. ಇದಕ್ಕಾಗಿ ೫೦ ಲಕ್ಷ ರೂಪಾಯಿಗಳೆಂದು ಮೊದಲು ಅಂದಾಜು ಮಾಡಿದ್ದರೂ. ಕಾರಣಾಂತರಗಳಿಂದ ನಾವು ಅಂದಾಜು ಮಾಡಿದುದಕ್ಕಿಂತ ಜಾಸ್ತಿ ಆಗಿದೆ, ೧ ಕೋಟಿ ೧೬ ಲಕ್ಷ ರೂಪಾಯಿಗಳು ಈ ಬಗ್ಗೆ ವೆಚ್ಚವಾಗಬಹುದೆಂದು ವರದಿ ಬಂದಿದೆ. ಹಣವನ್ನು ನಬಾರ್ಡ್, ಹಾಗೂ ಇತರೆ ಹಣಕಾಸಿನ ಸಂಸ್ಥೆಗಳಿಂದ ಒದಗಿಸಿಕೊಳ್ಳಲು ನಾವು ಪ್ರಯತ್ನ ಮಾಡುತ್ತೇವೆ. ನಾನು ಇಷ್ಟು ಮಾತ್ರ ಹೇಳಬಲ್ಲೆ ಸರ್ಕಾರಕ್ಕೆ ಇದರ ಬಗ್ಗೆ ಆಸಕ್ತಿ ಇದೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಕಳೆದ ಸಾರಿ ಬಜೆಟ್‌ನಲ್ಲಿ ೫೦ ಲಕ್ಷ ರೂಪಾಯಿಗಳು ಇದೆಯೆಂದು ತಿಳಿಸಿದ್ದೀರಿ.

ಶ್ರೀ ಹೆಚ್. ಡಿ. ದೇವೇಗೌಡ.—ಇದರ ಬಗ್ಗೆ ಅದಷ್ಟು ಬೇಗ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ. ಡೀಟೇಲ್ ಇನ್‌ವೆಸ್ಟಿಗೇಷನ್ ಮಾಡಿ ಇದರ ಬಗ್ಗೆ ಸಾಧ್ಯವಾದಷ್ಟು ಕೆಲಸಗಳನ್ನು ಪೂರ್ಣವಾಗಿ ಮಾಡುತ್ತೇವೆ.

ಅಧ್ಯಕ್ಷರು.–ಪ್ರಶ್ನೆ ಸಂಖ್ಯೆ ೩ (೧೧೭) ಶ್ರೀ ಜ್ಞಾನದೇವ ದೊಡ್ಡ ಪೇಟಿ.ಅವರು ‘ ಗೈರುಹಾಜರಿ’ ಲೋಕೋಪಯೋಗಿ ಇಲಾಖೆಯಲ್ಲಿ ಬಿಡುಗಡೆಯಾದ ಹಣ ಹಾಗೂ ವೆಚ್ಚ.

೩೫. ಶ್ರೀ ಆರ್. ವೆಂಕಟರಾಮಯ್ಯ, (ಮುಳಬಾಗಿಲು).—ಮಾನ್ಯ ಲೋಕೋಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರ ?

ಅ) ೧೯೮೬-೮೭, ೧೯೮೭-೮೮ರ ಆಯವ್ಯಯದಲ್ಲಿ ಸಣ್ಣ, ಮಧ್ಯಮ ಹಾಗೂ ಭಾರೀ ನೀರಾವರಿ ರಸ್ತೆ ಹಾಗೂ ಕಟ್ಟಡಗಳಿಗೆ ಎಷ್ಟೆಷ್ಟು ಹಣವೆಪ್ಪು ? ಈ ಹಣದಲ್ಲಿ ಇಲ್ಲಿಯವರೆಗೆ ಆಗಿರುವ ವೆಚ್ಚವೆಷ್ಟು.

ಆ) ಚಾಲ್ತಿ ವರ್ಷದಲ್ಲಿ ಇಲ್ಲಿಯವರೆಗೆ ವಿವಿಧ ಜಿಲ್ಲೆಗಳಲ್ಲಿ ಹಾಗೂ ಯೋಜನೆಗಳಿಗೆ ಬಿಡುಗಡೆ ಮಾಡಿರುವ ಹಣವೆಷ್ಟು ?

ಇ) ಹಿಂದಿನ ವರ್ಷ ಸದರಿ ಯೋಜನೆಗಳಿಗೆ ಬಿಡುಗಡೆ ಮಾಡಿದ ಹಣವೆಷ್ಟು ಹಾಗೂ ಮಾಡಿದ ವೆಚ್ಚವೆಷ್ಟು ?